ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,,
ಕನಕಪುರ

ಸಿ.ಸಿ ನಂ.**863/2019**

| **ಚಾಸಾ ಃ** | **3** | **ಪ್ರಾಸಾಃ-** | **5** |
|---|---|---|---|

| | |
|---|---|
| ಹೆಸರು | ಎಂ.ಬಿ ಯೋಗೇಶ್ |
| ತಂದೆಯ ಹೆಸರು | ಎಂ.ಸಿ ಬೀರಪ್ಪ |
| ವಯಸ್ಸು | 43 |
| ಉದ್ಯೋಗ | ಗ್ರಾಮಲೆಕ್ಕಾಧಿಕಾರಿ |
| ವಿಳಾಸ | ಬೆಂಗಳೂರು |

- - - - - - - - - - - - - - - - - - - - - - - - - - - - - - -

**ದಿಃ09.10.2024ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-

ನಾನು ದಿನಾಂಕ.**೨೦೧೮** ರಿಂದ **೨೦೨೦** ರ ವರೆಗೆ ಕಂಚನಹಳ್ಳಿ ಗ್ರಾಮಪಂಚಾಯಿತಿಯಲ್ಲಿ ಗ್ರಾಮಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

**೨೦೧೯**ನೇ ಇಸವಿಯಲ್ಲಿ ತಹಶೀಲ್ದಾರ್ ರವರು ನನಗೆ ಕರೆ ಮಾಡಿ ಕಂಚನಹಳ್ಳಿ ಗ್ರಾಮದಲ್ಲಿ ರೈತರು ಹಳ್ಳದ ಪಕ್ಕ ಮರಳನ್ನು ಶೇಖರಣೆ ಮಾಡಿರುತ್ತಾರೆ, ನೀವು ಹೋಗಿ ನೋಡಿ ಎಂದು ತಿಳಿಸಿರುತ್ತಾರೆ. ನಾನು ತಹಶೀಲ್ದಾರ್ ರವರ ಆದೇಶದಂತೆ ನಾನು ಸ್ಥಳಕ್ಕೆ ಹೋಗಿ ಸ್ಥಳ ಪರಿಶೀಲನೆ ಮಾಡಿದಾಗ ಮರಳು ಸಂಗ್ರಹಣೆ ಮಾಡಿದ ಗುಡ್ಡೆಗಳು ಕಂಡುಬಂದಿರುತ್ತದೆ. ಅವುಗಳನ್ನು ನಾನು ನನ್ನ ಮೊಬೈಲ್ ಪೋನ್ ನಿಂದ ಪೊಟೋಗಳನ್ನು ತೆಗೆದುಕೊಂಡಿರುತ್ತೇನೆ. ನಾನು ಅಲ್ಲಿದ್ದಂತಹ ಸಾರ್ವಜನಿಕರನ್ನು ಯಾರು ಈ ಮರಳನ್ನು ಶೇಖರಣೆ ಮಾಡಿದ್ದಾರೆಂದು ಕೇಳಲಾಗಿ **೪** ರಿಂದ **೫** ಜನ ಶೇಖರಣೆ ಮಾಡಿರುತ್ತಾರೆಂದು

ತಿಳಿಸಿರುತ್ತಾರೆ. ನಂತರ ನಾನು ಸಾತನೂರು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ.

ಮುಂದುವರೆದ ಮುಖ್ಯವಿಚಾರಣೆ ಕಾಲಾವಕಾಶ ಕೇಳಿದ್ದು, ಕಾಲಾವಕಾಶ ನೀಡಲಾಯಿತು.

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸರಿ ಇದೆ,**

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**